ಅವರ ಕಾರ್ಯಗಳೆಲ್ಲ ಮುಗಿದ ಅನಂತರ ಸೂಕ್ಷ್ಮವಾಗಿ ಗಮನಿಸಿದರೆ ಅವಳು ಅಲ್ಲಿ ಭಾರವಾಗಿದ್ದು ತಿಳಿಯುತ್ತಿತ್ತು. ಮನೆಯಲ್ಲಿದ್ದುದು ಮೂವರೇ. ಕೆಲಸವಾದರೂ ಎಷ್ಟಿತ್ತು? 'ಅಕ್ಕಪಕ್ಕದಲ್ಲಿ ಪಾತ್ರೆ, ಬಟ್ಟೆ ತೊಳೆಯುತ್ತೇನೆ ಕೇಳಿ' ಎಂದು ದುಂಬಾಲು ಬಿದ್ದಿದ್ದಳಂತೆ. ಅಷ್ಟರಲ್ಲೇ ಕೊರೊನಾದ ಗಲಾಟೆ ಆರಂಭವಾಯಿತು. ನಮ್ಮ ಕೆಲಸದವಳಿಗೆ ರಜೆ ಕೊಟ್ಟು ಊರಿಗೆ ಕಳಿಸಿದ್ದೂ ಆಯಿತು. ಎಲ್ಲರೂ ಮನೆಯಲ್ಲೇ. ವರ್ಕ್ ಫ್ರಂ ಹೋಮ್. ಅಡಿಗೆಮನೆಗೆ ಡಬಲ್ ಡ್ಯೂಟಿ. ವಿಶೇಷ ತಿಂಡಿ, ಅಡಿಗೆ... ಎನ್ನುತ್ತ ಪಾತ್ರೆಗಳ ರಾಶಿ ಬೀಳುತ್ತಿತ್ತು. ನನಗೂ ತೊಳೆದು ತೊಳೆದು ಸಾಕಾಗಿ ನಂದಿನಿಯ ಬಗ್ಗೆ ಯೋಚಿಸಿದೆ. ಹೇಗೂ ಅವಳು ಮೇಲ್ಗಡೆಯೇ ಇರುತ್ತಾಳೆ. ಬೇರಾರ ಮನೆಗೂ ಹೋಗುವುದಿಲ್ಲ. ಅಷ್ಟೇ ಸೇಫು ಎನ್ನುತ್ತ ಮನೆಯಲ್ಲೂ ವಿಷಯ ಪ್ರಸ್ತಾಪಿಸಿದೆ. ಅಳೆದೂ ಸುರಿದೂ ಒಪ್ಪಿದರು. ಪ್ರಿಯಂವದಾ ಮತ್ತು ನಂದಿನಿಯನ್ನು ಕೇಳಿದೆ. ಸಂತಸದಿಂದಲೇ ಒಪ್ಪಿಗೆ ಸೂಚಿಸಿದರು. ಅಷ್ಟರಮಟ್ಟಿಗೆ ನನಗೆ ನಿರಾಳವಾದದ್ದು ನಿಜ.

ಮರುದಿನದಿಂದಲೇ ಅಭಿಯಾನ ಆರಂಭವಾಯಿತು. ಮೊದಲ ದಿನ ಪ್ರಿಯಂವದಾ ಅವಳೊಡನೆ ಬಂದು ದುಭಾಷಿಯಾದರು. ನಾನು ಹೇಳಿದ್ದನ್ನು ಅವಳಿಗೆ ತಿಳಿಸಿ ಹೇಳಿ ಜಾಗ ತೋರಿಸಿ... ಇತ್ಯಾದಿಯಾಯಿತು. ಅವರು ತೆರಳಿದ ಅನಂತರ ಕೈ, ಬಾಯಿ ತಿರುಗಿಸುವ ನಮ್ಮ ಮೂಕ ಭಾಷೆ ಆರಂಭವಾಯಿತು. ಏಕೆಂದರೆ, ಅವಳಿಗೆ ಕನ್ನಡ ಬಿಡಿ, ಹಿಂದಿ ಕೂಡ ಅಷ್ಟಕ್ಕಷ್ಟೆ. ನನಗೆ ಒಡಿಯಾದ ಗಂಧವೂ ಇಲ್ಲ. "ಖಾನಾ?" ಎಂದು ಕೇಳಿದೆ. ಅಡ್ಡಡ್ಡ ತಲೆಯಾಡಿಸಿ "ಊಟ ಮಾಡಲು ನಾಚಿಕೆಯಾಗುತ್ತದೆ" ಎಂದಳು. ಸುಮ್ಮನಾದೆ. "ಚೊಯ್" ಎಂದಳು ಒಡಿಯಾ ಶೈಲಿಯಲ್ಲಿ. ಚಹಾ ಮಾಡಿಕೊಟ್ಟೆ. ಕುಳಿತುಕೊಂಡು ಕುಡಿದಳು. ನಮ್ಮ ಮೊದಲ ಕೆಲಸದವಳು ಅರ್ಧ ಗಂಟೆಯಲ್ಲಿ ಮಾಡುತ್ತಿದ್ದ ಕೆಲಸವನ್ನು ಇವಳು ಎರಡು ಗಂಟೆಯವರೆಗೆ ಶ್ರದ್ಧೆಯಿಂದ ಮಾಡುತ್ತಿದ್ದಳು. ಒಂದೊಂದೇ ಪಾತ್ರೆಯನ್ನು ತಿಕ್ಕಿ ತೊಳೆದಿಟ್ಟು ಅನಂತರ ಮುಂದಿನ ಪಾತ್ರೆಯತ್ತ ಪಯಣ. ಒಮ್ಮೊಮ್ಮೆ ಕಿರಿಕಿರಿ ಎನಿಸಿದರೂ ಕೊರೊನಾದ ಸಂಕಷ್ಟ ಕಾಲದಲ್ಲಿ ಇಷ್ಟಾದರೂ ದೊರಕಿದೆಯಲ್ಲ ಎಂದು ಸಮಾಧಾನಪಟ್ಟುಕೊಳ್ಳಬೇಕಾಯಿತು. ಅವಳು ನಿಧಾನವಾಗಿ ಮೈಚಳಿ ಬಿಟ್ಟು ಮಾತಾಡಲಾರಭಿಸಿದ್ದು ಎರಡು ದಿನಗಳ ಅನಂತರವೇ...

ಮೂರನೇ ದಿನವೇ ತಿಂಗಳು ಮುಗಿಯಿತು. ನಾನು, "ಈ ಎರಡು ದಿನಗಳ ದುಡ್ಡು ಕೊಡಲೇ... ಅಥವಾ ಒಟ್ಟಿಗೆ ಮುಂದಿನ ತಿಂಗಳು ಕೊಡಲೇ?" ಎಂದು ಕೇಳಿದೆ. ಕತ್ತಾಡಿಸಿದಳು... ನನಗೆ ತಿಳಿಯಲಿಲ್ಲ. "ನನಗೆ ಲೆಕ್ಕ ಅರ್ಥವಾಗುವುದಿಲ್ಲ. ದುಡ್ಡು ಎಣಿಸಲೂ ಬರುವುದಿಲ್ಲ. ದೀದಿಯನ್ನು ಕೇಳಿ. ಅವರ ಕೈಯಲ್ಲೇ ಕೊಡಿ" ಎಂದಳು. ನಾನು ಹೌಹಾರಿದೆ. "ಏನೂ... ನಿನಗೆ ದುಡ್ಡು ಎಣಿಸಲು ಬರುವುದಿಲ್ಲವೇ?" ಎಂದು ಕೇಳಿದೆ. "ಇಲ್ಲ, ದೀದಿ ಇಷ್ಟಿಷ್ಟು ದುಡ್ಡನ್ನು ನನ್ನಮ್ಮನಿಗೆ ಕಳಿಸುತ್ತಿದ್ದಾರೆ... ನಾನಿಲ್ಲಿ ಕೆಲಸ ಮಾಡುವುದಕ್ಕಾಗಿ..." ಎಂದಳು. ಚಿಕ್ಕ ಮಕ್ಕಳಂತೆ 'ಇಷ್ಟಿಷ್ಟು...' ಎಂದು ಕೈ ಅಗಲಿಸಿ ಹೇಳಿದಾಗ ನಂಬಿಕೆ ಮೂಡಿತು. "ಹಾಗಾದರೆ ಓದುವುದು... ಬರೆಯುವುದು..." ಎಂದೆ. "ಉಹ್ಞೂಂ... ಕಾಲಾ ಅಕ್ಷರ... ಭೈಂಸ್ ಬರಾಬರ್. ನನ್ನ ಅಕ್ಕತಂಗಿಯರೆಲ್ಲ ಕೊಂಚ ಕಲಿತಿದ್ದಾರೆ. ಅವರು ದುಡ್ಡು ಎಣಿಸುತ್ತಾರೆ. ನನಗೆ ಯಾವುದೂ ಬರುವುದಿಲ್ಲ. ಬರೀ ಕೆಲಸ ಮಾಡುವುದು... ಊಟ ಮಾಡುವುದಷ್ಟೇ ಗೊತ್ತು" ಎಂದಳು. "ಮತ್ತೆ... ಮತ್ತೆ ಹೇಗೆ ಮಾಡುತ್ತೀ?" ಎಂದು ಗಾಬರಿಯಿಂದಲೇ ಕೇಳಿದೆ. "ಏನು ಮಾಡುವುದು... ಅಮ್ಮ ಎಲ್ಲ ನೋಡಿಕೊಳ್ಳುತ್ತಾಳೆ. ನಾನು ಬರೀ ಊಟ... ಕೆಲಸ..." ಎಂದವಳ ಮಾತು ಕೇಳಿ ಅವಾಕ್ಕಾಗಿ ಬಾಯ್ತೆರೆದೆ.

ನಿಜವಾಗಿಯೂ... ಇಲ್ಲಿಯವರೆಗೆ 'ಕಾಸು, ನೋಟು ಎಣಿಸಲು ಗೊತ್ತಾಗುವುದಿಲ್ಲ' ಎನ್ನುವವರನ್ನು ನೋಡಿಯೇ ಇರಲಿಲ್ಲ. ಎಳೆಯ ಮಕ್ಕಳನ್ನು ಬಿಟ್ಟು. ಅದು ನನ್ನ ಮಿತಿಯೂ ಇರಬಹುದು.